## ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮಾಡುವುದು

**306 (284) ಶ್ರೀ ಶಿವಶಂಕರ ರೆಡ್ಡಿ ಎನ್. ಹೆಚ್.** (ಗೌರಿಬಿದನೂರು):– ಲೋಕೋಪಯೋಗಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕರ್ನಾಟಕ ರಾಜ್ಯದಲ್ಲಿ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮಾಡಲು ಎಷ್ಟು ರಸ್ತೆಗಳ ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ (ಜಿಲ್ಲಾವಾರು ವಿವರ ಒದಗಿಸುವುದು);

ಆ) ಇದರಲ್ಲಿ, ಎಷ್ಟು ಕಿ.ಮೀ. ಒಳಗೊಂಡಿದೆ; ಇದಕ್ಕೆ ತಗಲುವ ಅನುದಾನ ಎಷ್ಟು (ವಿವರ ಒದಗಿಸುವುದು)?

**ಶ್ರೀ ಸಿ. ಎಂ. ಉದಾಸಿ** (ಲೋಕೋಪಯೋಗಿ ಇಲಾಖಾ ಸಚಿವರು):–

ಅ) ಕರ್ನಾಟಕ ರಾಜ್ಯದಲ್ಲಿ ಒಟ್ಟು 21 ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದರಿಗಳನ್ನಾಗಿ ಮಾಡಲು ವಿವರಗಳನ್ನೊಳಗೊಂಡ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. (ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.)

ಆ) 21 ರಾಜ್ಯ ಹೆದ್ದಾರಿಗಳ ಉದ್ದ 4031 ಕಿ.ಮೀ. ಕೇಂದ್ರ ಸರ್ಕಾರದಿಂದ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮಾಡುವ ಪ್ರಸ್ತಾವನೆಗೆ ಅನುಮೋದನೆ ದೊರಕಿದ ನಂತರ ಅಭಿವೃದ್ಧಿಪಡಿಸಲು/ನಿರ್ವಹಣೆಗಾಗಿ ಹಂತ ಹಂತವಾಗಿ ಕೇಂದ್ರ ಸರ್ಕಾರದ ಅನುದಾನ ಲಭ್ಯತೆಗೆ ಅನುಗುಣವಾಗಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು.